



ಅವಳಿಗೆ ಇಷ್ಟವಾಗಿರಲಿಲ್ಲ. ಹರಿಲಾಲ ತನ್ನ ಜೀವನ ಸಾಗಿಸುವುದನ್ನು ನೋಡಿ ಬಲಿ ಬಹನಳ ಮನಸ್ಸಿನಲ್ಲಿ ಜಿಗುಪ್ಸೆ ಹುಟ್ಟಿತ್ತು. ಅಲ್ಲದೆ ಅವನು ಸುಧಾರಣೆಗೊಳ್ಳಲು ಸಹ ಪ್ರಯತ್ನಿಸುತ್ತಿರಲಿಲ್ಲ. ಜಿಗುಪ್ಸೆ ಮತ್ತು ಸುಖ, ಈ ಎರಡರ ನಡುವೆ ಕಳೆಯಲು ಲಭಿಸಿದ್ದ ಸಮಯ ಕಡಿಮೆಯಾಗಿತ್ತು; ಹೀಗಾಗಿ ಮಗಳ ಮದುವೆ ಮುಗಿದ ಕೂಡಲೇ ಹರಿಲಾಲ ಮುಂಬೈಗೆ ಹೋಗಲು ತೀರ್ಮಾನಿಸಿದ.

ಮುಂಬೈಗೆ ಹೋಗುವುದರ ಹಿಂದೆ ಅಂಥ ವಿಶೇಷ ಕಾರಣವಿರಲಿಲ್ಲ. ಎಲ್ಲಿಗೆ ಹೋಗಬೇಕು, ಏನು ಮಾಡಬೇಕೆಂದು ಇನ್ನೂ ನಿರ್ಧಾರವಾಗಿರಲಿಲ್ಲ. ನಿಜ ಹೇಳಬೇಕೆಂದರೆ ಅವನಿಗೇ ಏನೂ ತೋಚುತ್ತಿರಲಿಲ್ಲ. ಬಾ ಅವರ ಬಳಿಗೆ ಹೋಗಿ ಆಶ್ರಮದಲ್ಲಿರಬೇಕೆಂದು ಮನಸ್ಸು ಬಯಸುತ್ತಿತ್ತು. ಆದರೆ ಈ ಭಾವನೆಯನ್ನು ಹರಿಲಾಲ ಬಲಾತ್ಕಾರದಿಂದ ತಡೆದಿದ್ದ. ಅವನಿಗೆ ಆಶ್ರಮದ ರೀತಿನೀತಿಯ ಅರಿವಿತ್ತು. ತಾನೀಗ ಆಶ್ರಮದ ಆ ರೀತಿ ನೀತಿಯಿಂದ ತುಂಬಾ ದೂರಕ್ಕೆ ಸಾಗಿದ್ದೇನೆ ಎಂದು ಅವನಿಗೆ ಅನ್ನಿಸುತ್ತಿತ್ತು. ಅವನ ಪ್ರತಿಯೊಂದು ಕಷ್ಟದ ಸಮಯದಲ್ಲಿ ಬಾಪೂ ಅವರು ತೋರಿದ ವರ್ತನೆಯನ್ನು ಅವನಿಂದ ಮರೆಯಲಾದೀತೆ? ಬಾಪೂ ಅವರ ತೋರ್ಪಡಿಕೆಯ ವಿಸಂಗತಿಗಳಿಂದ ಅವನ ಮನಸ್ಸು ನೊಂದಿತ್ತು. ಈ ದುಃಖದೊಂದಿಗೆ ಅವನ ಮನಸ್ಸಿನಲ್ಲಿ ರೋಷ ಮತ್ತು ಹತಾಶೆಯ ಭಾವನೆಗಳು ಹುಟ್ಟುತ್ತಿದ್ದವು.

ಆಶ್ರಮದಲ್ಲಿ ಬಾ ಅವರಿದ್ದರು. ರಾಮದಾಸ್ ಮತ್ತು ದೇವದಾಸ್ ಇದ್ದರು. ಮಣಿಲಾಲನನ್ನು ಬಾಪೂ ಆಶ್ರಮದಿಂದ ಗಡೀಪಾರು ಮಾಡಿದಂತಿತ್ತು. ಮಣಿಲಾಲನಿಗೆ ಬಾಪೂ ಅವರು ವಿಧಿಸಿದ ಶಿಕ್ಷೆಯನ್ನು ಹರಿಲಾಲನಿಂದ ಮರೆಯಲು ಸಾಧ್ಯವಾಗುತ್ತಿರಲಿಲ್ಲ. ಮಣಿಲಾಲ ಸಹ ಬಾಪೂ ಅವರ ಈ ವ್ಯವಹಾರದಿಂದ ನೊಂದಿದ್ದ ಎಂಬುದು ಹರಿಲಾಲನಿಗೆ ತಿಳಿದಿತ್ತು. ಆದರೆ ಅವನು ತನ್ನ ನೋವನ್ನು ಅಣ್ಣನಂತೆ ಬಹಿರಂಗವಾಗಿ ವ್ಯಕ್ತಪಡಿಸಿರಲಿಲ್ಲ ಎಂಬುದರಲ್ಲಿ ಅನುಮಾನವಿರಲಿಲ್ಲ. ಆದರೆ ಹರಿಲಾಲ, ಮಣಿಲಾಲನ ಬಗ್ಗೆ ಬಾಪೂ ಅವರ ವರ್ತನೆಯಿಂದ ಅಸಂತುಷ್ಟನಾಗಿದ್ದ. ಮಣಿಲಾಲನ ಮೌನ, ವ್ಯಥೆಯನ್ನು ಮನದೊಳಗೇ ಹತ್ತಿಕ್ಕಿಕೊಂಡು ಇಟ್ಟುಕೊಳ್ಳುವ ಅವನ ಸಾಮರ್ಥ್ಯ ಬಹುಶಃ ಹರಿಲಾಲನಲ್ಲಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ತಾನು ಆಶ್ರಮಕ್ಕೆ ಹೋಗಿರಲು ಆರಂಭಿಸಿದರೆ... ಆಗ ಈ ಬದುಕು ಪರಾಜಿತ ಮತ್ತು ಅವಮಾನದ ಬದುಕಾಗುವುದು... ಬಾಪೂ ಏನನ್ನೂ ಹೇಳದಿರಬಹುದು, ಉದಾರ ಮನಸ್ಸಿನಿಂದ ತನ್ನನ್ನು ಕ್ಷಮಿಸಬಹುದು, ಆದರೆ ತಾನು ಅಷ್ಟು ವರ್ಷಗಳಿಂದ, ದೃಢ ವಿಚಾರಗಳಿಂದ ಪ್ರೇರಿತನಾಗಿ ಪ್ರತ್ಯೇಕವಾಗಿದ್ದೇನೆ, ತನ್ನ ಈ ವಿಚಾರಗಳು ಸುಳ್ಳಾಗುವುದಿಲ್ಲವೇ? ಇದಕ್ಕಿಂತ ತಾನು ಮತ್ತೆ ಹೊಸದಾಗಿ ತನ್ನ ಜೀವನದ ಹಾದಿಯನ್ನು ಹುಡುಕಿಕೊಳ್ಳಬೇಕು, ಇದೇ ಲೇಸು. ಈ ಹಾದಿಯನ್ನು ಅರಸುವ ಕೊಂಡಿ ಅವನಿಗೆ ಮುಂಬೈನಲ್ಲಿ ಕಾಣಬರುತ್ತಿತ್ತು. ಕಲ್ಕತ್ತಾ ಅವನಿಗೆ ಯಶಸ್ಸನ್ನು ತರಲಿಲ್ಲ, ಬಹುಶಃ ತನಗೆ ಮುಂಬೈನಲ್ಲಿ ಯಶಸ್ಸು ಲಭಿಸಬಹುದು. ಈಗ ಕೆಲವು ತಿಂಗಳು ನಿಶ್ಚಿಂತೆಯಿಂದ ಕಳೆಯುವಷ್ಟು ಹಣ ಅವನ ಬಳಿಯಿತ್ತು. ಈ ನಡುವೆ ತನಗೆ ಹೊಸ ಉದ್ಯೋಗ ಅಥವಾ ನೌಕರಿ ಸಿಗಬಹುದು.

* * *

ಮುಂಬೈನಲ್ಲಿ ಉಳಿದುಕೊಳ್ಳಲು ಯೋಗ್ಯವಾದ ಅನೇಕ ಸ್ಥಳಗಳಿದ್ದವು. ಹಳೆಯ ಗೆಳೆಯರು ಮಿತ್ರರು ಇದ್ದರು. ಹರಿಲಾಲನ ಸಂಬಂಧಿಕರಂತೂ ಇದ್ದರು. ಆದರೆ ತಾನು ಇವರೆಲ್ಲರ ದೃಷ್ಟಿಯಲ್ಲಿ ಕೆಳಮಟ್ಟಕ್ಕಿಳಿದಿದ್ದೇನೆ ಎಂಬುದು ಹರಿಲಾಲನಿಗೆ ತಿಳಿದಿತ್ತು. ಅವರ ಮನೆಗೆ ಹೋಗುವುದಕ್ಕೆ ಬದಲು ಒಂದು ಅಗ್ಗದ ಹೊಟೇಲಿನಲ್ಲಿ ಉಳಿದುಕೊಳ್ಳಲು ಹರಿಲಾಲ ನಿರ್ಧರಿಸಿದ. ಮುಂಬೈಗೆ ಹೋದ ನಂತರ ಅವನು ಧೋಬಿ ತಲಾಬ್ ಸಮೀಪದಲ್ಲಿದ್ದ ಕಶ್ಮೀರಿ ಹೊಟೇಲ್‌ನಲ್ಲಿ ಬಿಡಾರ ಹೂಡಿದ. ಈ ಹೊಟೇಲ್ ನಗರದ ಮಧ್ಯ ಭಾಗದಲ್ಲಿತ್ತು. ಹೊಟೇಲ್ ಅಗ್ಗವಾಗಿದ್ದು, ಕಡಿಮೆ ಖರ್ಚಿನಲ್ಲಿ ದೀರ್ಘ ಸಮಯದವರೆಗೆ ಇರಬಹುದಿತ್ತು. ರಾಜಕೋಟದಲ್ಲಿದ್ದಾಗ ಅವನ ಚಟುವಟಿಕೆಗಳು ಗತ್ಯಂತರವಿಲ್ಲದೆ ನಿಂತಿದ್ದವು. ಈಗ ಈ ಸ್ಥಳ ಅದಕ್ಕೆ ಯೋಗ್ಯವಾಗಿದೆ ಎಂದು ಅನ್ನಿಸಿತು. ಕೈಯಲ್ಲಿ ಹಣವಿತ್ತು...ಚಿಂತೆ ಕಡಿಮೆಯಾಗಿತ್ತು... ಅಸಹಾಯಕತೆ ಕಾಡಿಸುತ್ತಿತ್ತು...ಸಿಟ್ಟು, ನಿರಾಸೆ ಮತ್ತು ಆಸೆ ಸಹ ಇದ್ದವು...ಕಶ್ಮೀರಿ ಹೊಟೇಲ್‌ನಲ್ಲಿ ಬಿಡಾರ ಹೂಡಿದೊಡನೆಯೇ ಅವನ ಮನಸ್ಸು ಮತ್ತೊಮ್ಮೆ ಚಂಚಲಗೊಂಡಿತು.

ಕಶ್ಮೀರಿ ಹೊಟೇಲ್‌ನಲ್ಲಿ ಉಳಿದುಕೊಂಡಿದ್ದ ಈ ದಿನಗಳು ಉಪಯೋಗಕ್ಕೆ ಬರದ ದಿನಗಳಾಗಿದ್ದವು. ಹರಿಲಾಲ ಸಾಮಾನ್ಯವಾಗಿ ಹಗಲಿಡೀ ತನ್ನ ಕೋಣೆಯಲ್ಲಿಯೇ ಬಿದ್ದಿರುತ್ತಿದ್ದ. ಒಂಟಿತನದ ಈ ವೇಳೆಯಲ್ಲಿ ಮದ್ಯದ ಬಾಟಲಿಗಳು ಅವನಿಗೆ ಪೂರ್ಣವಾಗಿ ಸಹಕರಿಸುತ್ತಿದ್ದವು. ಮದ್ಯದ ಅಮಲನ್ನು ಸಹಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆಗ ಹರಿಲಾಲ ಗಂಟೆಗಟ್ಟಲೆ ಕವುಚಿ ಮಲಗಿರುತ್ತಿದ್ದ. ಬೇರೆ ದೌರ್ಬಲ್ಯಗಳೂ ಸಹ ಮುತ್ತಿಗೆ ಹಾಕಿದಾಗ ಅವನು ವೇಶ್ಯಾ ಬಜಾರಿಗೆ ಹೋಗುತ್ತಿದ್ದ. ಅಮಲು ಇಳಿದಾಗ ಯೌವನದ ಬಜಾರಿನಲ್ಲಿ ಸಮಯವನ್ನು ಕಳೆಯುತ್ತಿದ್ದ ಅಥವಾ ಮತ್ತೆ ಯೋಚನೆಗಳಲ್ಲಿ ಕಳೆದು ಹೋಗುತ್ತಿದ್ದ. ಟಿನ್ ಬಾಕ್ಸ್‌ನಲ್ಲಿ ತನ್ನ ವಸ್ತುಗಳನ್ನಿಟ್ಟುಕೊಂಡು ಅಲೆದಾಡುತ್ತಿದ್ದ, ಅದರಲ್ಲಿ ಭಗವದ್ಗೀತೆಯ ಆ ಹಳೆಯ ಪ್ರತಿ ಸದಾ ಅವನೊಂದಿಗಿರುತ್ತಿತ್ತು. ಅವನು ಎವೆಯಿಕ್ಕದೆ ಆ ಪುಸ್ತಕವನ್ನೇ ನೋಡುತ್ತಿದ್ದ. ಬಾಪೂ ಅವರಿಗೆ ಈ ಗ್ರಂಥದಿಂದ ಸದಾ ಭರವಸೆ, ವಿಶ್ವಾಸ ಮತ್ತು ಮಾರ್ಗದರ್ಶನ ಲಭಿಸುತ್ತಿತ್ತು, ಆದರೆ ಇದರಿಂದ ತನಗೇಕೆ ಏನೂ ಲಭಿಸುವುದಿಲ್ಲ ಎಂಬುದು ಹರಿಲಾಲನಿಗೆ ಅರ್ಥವಾಗುತ್ತಿರಲಿಲ್ಲ. ಅವನು ಗ್ರಂಥದ ಹಾಳೆಗಳನ್ನು ತಿರುವಿ ಹಾಕುತ್ತಿದ್ದ... ಒಂದೇ ಸಮನೆ ನೋಡುತ್ತಿದ್ದ, ನಂತರ ಅಜ್ಞಾತ ಭಾವನೆಯಿಂದ ಗ್ರಂಥವನ್ನು ಪೆಟ್ಟಿಗೆಯ ಒಳಗಿಟ್ಟು ಮತ್ತೆ ತನ್ನೊಳಗೆ ಕಳೆದು ಹೋಗುತ್ತಿದ್ದ.

** *

ಅದೆಷ್ಟೋ ಬಾರಿ ಹರಿಲಾಲ ತನ್ನ ಹಳೆಯ ಮಿತ್ರರು ಮತ್ತು ಸಂಬಂಧಿಕರನ್ನು ಭೇಟಿಯಾಗಲು ಹೋಗುತ್ತಿದ್ದ; ದಿನವಿಡಿ ಅಲೆಯುತ್ತಿದ್ದ. ಮೈಲಿಗಟ್ಟಲೆ ಕಾಲ್ನಡಿಗೆಯಲ್ಲಿ ಹೋಗುವ ಅಭ್ಯಾಸ ಬಾಲ್ಯದಿಂದಲೇ ಇತ್ತು. ಅವನು ಹೆಚ್ಚಾಗಿ ಕಾಲ್ನಡಿಗೆಯಲ್ಲಿಯೇ ಹೋಗುತ್ತಿದ್ದ. ಆಗಾಗ ಟ್ರಾಮ್ ಅಥವಾ ಲೋಕಲ್ ರೈಲಿನಲ್ಲಿ ಕೂತು ಅಲೆದಾಡುತ್ತಿದ್ದ. ತಾನು ಹೀಗೆ ಅಲೆದಾಡುತ್ತಿದ್ದರೆ ಬಹುಶಃ ಯಾವುದಾದರು ನೌಕರಿ ಸಿಗಬಹುದು ಎಂಬ ವಿಶ್ವಾಸವಿತ್ತು.

ಅವನ ಈ ವಿಶ್ವಾಸ ಒಂದು ದಿನ ಅನಿರೀಕ್ಷಿತವಾಗಿ ನೆರವೇರಿತು. ಮುಂಬೈನ ಗೋದರೇಜ್ ಕಂಪನಿಯ ಮಾಲೀಕರು ಒಂದು ಸಮಾರಂಭವನ್ನು ಏರ್ಪಡಿಸಿದ್ದರು. ದೇಶದ ಮಹಾನ್ ನೇತಾರರಾದ ಸ್ವರ್ಗೀಯ ದಾದಾಭಾಯಿ ನೌರೋಜಿಯವರ ಪುಣ್ಯತಿಥಿಯನ್ನು ಅವರು ಆಚರಿಸುತ್ತಿದ್ದರು. ಈ ಸಮಯದಲ್ಲಿ ಗೋದರೇಜ್ ಕಂಪನಿಯು ಮುಂಬೈ ಮಾತ್ರವಲ್ಲ, ದೇಶದ ಪ್ರಸಿದ್ಧ ನೇತಾರರ ಉಪಸ್ಥಿತಿಯಲ್ಲಿ ಒಂದು ಸಮಾರಂಭವನ್ನು ಏರ್ಪಡಿಸಿತ್ತು. ಮುಂಬೈನ ಎಲ್ಲಾ ಕಾಂಗ್ರೆಸ್ ಮುಖಂಡರು ಈ ಸಮಾರಂಭದಲ್ಲಿ ಉಪಸ್ಥಿತರಿರುವ ಸಾಧ್ಯತೆಯಿತ್ತು. ಈ ಸಮಾರಂಭದ ಬಗ್ಗೆ ಹರಿಲಾಲ ಪತ್ರಿಕೆಗಳಲ್ಲಿ ಓದಿದ. ಅವನಿಗೆ ಬೇರೆ ಉದ್ಯೋಗ ಅಥವಾ ಕೆಲಸವಿರಲಿಲ್ಲ, ಹೀಗಾಗಿ ಸಮಾರಂಭದ ಸ್ಥಳಕ್ಕೆ ಸರಿಯಾದ ಸಮಯಕ್ಕೆ ಹೋದ. ಹರಿಲಾಲ ದಾದಾಭಾಯಿಯವರನ್ನು ಎಂದೂ ನೋಡಿರಲಿಲ್ಲ. ಆದರೆ ಅವರ ಕಾರ್ಯಗಳು ಮತ್ತು ಕೊಡುಗೆಗಳ ಬಗ್ಗೆ ಅವನಿಗೆ ಮಾಹಿತಿಯಿತ್ತು. ಹರಿಲಾಲನ ಮನಸ್ಸಿನಲ್ಲಿ ಈ ಪ್ರಮುಖರ ಬಗ್ಗೆ ತುಂಬಾ ಗೌರವವಿತ್ತು. ಅಲ್ಲದೆ ಈ ಸಮಾರಂಭದಲ್ಲಿ ಭಾಗವಹಿಸುವ ಕಾಂಗ್ರೆಸ್ ನಾಯಕರ ಹೆಸರಿನ ಪಟ್ಟಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿತ್ತು. ಇದರಿಂದಾಗಿಯೂ ಅವನ ಮನಸ್ಸು ಈ ಸಮಾರಂಭದಲ್ಲಿ ಭಾಗವಹಿಸಲು ಬಯಸಿತು. ಆ ಪಟ್ಟಿಯಲ್ಲಿರುವ ಅನೇಕ ಮಹಾನುಭಾವರನ್ನು ಹರಿಲಾಲ ವೈಯಕ್ತಿಕವಾಗಿ ಗುರುತಿಸುತ್ತಿದ್ದ. ಇವರನ್ನೆಲ್ಲಾ ಭೇಟಿಯಾಗುವ ಅಥವಾ ಭೇಟಿಯಾಗದಿದ್ದರೆ ಅವರನ್ನು ನೋಡುವ, ಅವರ ಭಾಷಣಗಳನ್ನು ಕೇಳುವ ತೀವ್ರ ಇಚ್ಛೆ ಹರಿಲಾಲನನ್ನು ಸಮಾರಂಭಕ್ಕೆ ಹೋಗಲು ಪ್ರೇರೇಪಿಸಿತು.

ಸಮಾರಂಭದ ಸ್ಥಳಕ್ಕೆ ಹರಿಲಾಲ ಸರಿಯಾದ ಸಮಯಕ್ಕೆ ಹೋಗಿದ್ದ. ಕೆಲವೇ ನಿಮಿಷಗಳಲ್ಲಿ ಸಭೆ ತುಂಬಿತು. ತನಗೆ ಪರಿಚಯವಿದ್ದ ಮುಖಂಡರು ಗುಂಪಿನಲ್ಲಿ ರಸ್ತೆಯನ್ನು ಮಾಡಿಕೊಳ್ಳುತ್ತಾ ವೇದಿಕೆಗೆ ಹೋಗುವುದನ್ನು ಹರಿಲಾಲ ನೋಡಿದ. ಅವರಲ್ಲಿ ಒಬ್ಬರ ಮೇಲೆ ಹರಿಲಾಲನ ದೃಷ್ಟಿ ಸ್ಥಿರವಾಯಿತು. ಅವರು ಸಹ ಆಶ್ಚರ್ಯದಿಂದ ಹರಿಲಾಲನನ್ನು ನೋಡಿದರು, ನಂತರ ಅವರ ಮುಖದಲ್ಲಿ ಪರಿಚಯದ ಮುಗುಳ್ನಗೆ ಮೂಡಿತು. ಹರಿಲಾಲ ಸಹ ಕೈಮುಗಿದು ಆ ಮುಗುಳ್ನಗೆಯನ್ನು ಸ್ವಾಗತಿಸಿದ.

‘ಹರಿಲಾಲ್! ನೀವು...ಇಲ್ಲಿ? ನೀವು ಹೇಗಿದ್ದೀರ? ಆರೋಗ್ಯ ಹೇಗಿದೆ?’ ಅವರು ಪ್ರೀತಿಯಿಂದ ಆದರೆ